## ಯುದ್ಧದ ಪರಿಣಾಮ!



'ಮಕ್ಕಳೇ, ಈಚಿನ ಮಧ್ಯಪ್ರಾಚ್ಯ ದೇಶಗಳ ಯುದ್ಧದಿಂದಾದ ಲಾಭ– ನಷ್ಟವೇನು? ಯಾರು ಹೇಳ್ತೀರಿ?' ಅಂದ್ರು ಮೇಡಂ.

ಗುಂಡ ಮೊದಲು ಕೈಯೆತ್ತಿ, 'ನಾನು ಹೇಳ್ತೀನಿ. ತುಂಬಾ ಲಾಭ ಇದೆ ಮೇಡಂ' ಅಂತ ಶುರು ಮಾಡಿ, 'ನನ್ನ ಫ್ರೆಂಡ್ಸ್ ಎಲ್ಲಾ ಕೇಳ್ತಿದ್ರು ಏನೋ ಗುಂಡಾ ಈಚೆಗೆ ಸ್ಲಿಮ್ ಆಗಿದೀಯಾ ಯಾವ ಜಿಮ್‌ಗೆ ಹೋಗ್ತೀಯಾ ಅಂದ್ರು' ಅಂದಾಗ,

ಮೇಡಂ 'ಹೌದು ಕಣೋ ಗುಂಡಾ, ನಂಗೂ ಹಾಗೇ ಅನ್ನಿಸ್ತಿದೆ. ಏನು ಮ್ಯಾಜಿಕ್ ಮಾಡಿದೆ? ಅಂದ್ರು.

'ಅಯ್ಯೋ ಮೇಡಂ, ಯುದ್ಧ ಶುರುವಾಗಿ ಅಡುಗೆ ಸಿಲಿಂಡರ್ ಸಿಗ್ತಿಲ್ಲ ಅಲ್ವಾ? ಹೋಟೆಲಿನಲ್ಲಿ ಪೂರಿ, ಬಜ್ಜಿ, ಬೋಂಡಾ, ಎಣ್ಣೆ ತಿಂಡಿ ಎಲ್ಲಾ ನಿಂತ್ಹೋಯ್ತಲ್ಲ. ಆ ಕಾರಣ ನಾನು ಇತಿಮಿತಿ ಇಲ್ದೆ ತಿಂತಿದ್ದಿದ್ದೂ ಕಮ್ಮಿ ಆಯ್ತು. ಆಟೋಮ್ಯಾಟಿಕ್ ಆಗಿ ಸ್ಲಿಂ ಆಗಿದೀನಿ. ಇದೇ ನನಗಾದ ಲಾಭ. ನನ್ನಂಥ ಒಬೆಸಿಟಿ ಇರೋವ್ರಿಗೆ ಇದು 'ರಾಮಬಾಣ' ಅಂದ.

ಗುಂಡನ ಮಾತಿಗೆ ಮೇಡಂ ಮತ್ತು ಮಕ್ಕಳು ತಲೆ ಆಡಿಸ್ತಾ ನಕ್ಕರು.

**ಸುಮನಾ**

## ಸಾಹೇಬ್ರು ಬೈತಾರೆ

ಸರ್ಕಾರಿ ಕಚೇರಿಯೊಂದರಲ್ಲಿ, ಕಚೇರಿಯ ಕೆಲಸದ ಆರಂಭದ ಅವಧಿಯಾಗಿದ್ದರೂ ಸಿಬ್ಬಂದಿ ಕೆಲಸ ನಿರ್ವಹಿಸದೇ, ಇತರೆ ಸಿಬ್ಬಂದಿಗಳೊಂದಿಗೆ ಹರಟೆ ಹೊಡೆಯುತ್ತಾ, ಜೋರಾಗಿ ಮಾತನಾಡುತ್ತಾ ಕಾಲಹರಣ ಮಾಡುತ್ತಿದ್ದರು.



ಅಟೆಂಡರ್ ಗುಂಡ, ಸಾಹೇಬ್ರ ಚೇಂಬರ್‌ನಿಂದ ಹೊರ ಓಡಿಬಂದು, ಹರಟೆ ಹೊಡೆಯುತ್ತಿದ್ದ ಸಿಬ್ಬಂದಿ ಕುರಿತು 'ಜೋರಾಗಿ ಗಲಾಟೆ ಮಾಡಬಾರದು ಅಂತೆ ಸಾಹೇಬ್ರು ಬೈತಾವ್ರೆ' ಎಂದ.

ಸಿಬ್ಬಂದಿಯೊಬ್ಬ 'ಸಾಹೇಬ್ರ ಬಳಿ ಅಷ್ಟೊಂದು ಕಡತಗಳು ಬಾಕಿ ಇವೆಯಾ?' ಎಂದ. 'ಎಂಥದ್ದೂ ಇಲ್ಲ ಸರ್. ಸಾಹೇಬರು ನಿದ್ದೆ ಮಾಡ್ತಾವ್ರೆ. ಡಿಸ್ಟರ್ಬ್ ಆಗ್ತಾ ಇದೆಯಂತೆ ಅಂದ' ಗುಂಡ!.

**ಚಂದ್ರಕುಮಾರ್ ಡಿ.**